# *Press Clipping*

**Publication : Udayavani**
**Date : June 7, 2016**
**Edition : State**
**Page : 14**

**The Resource Centre**

---



# ನಿರುತ್ತರ ಹಾಡು ಬಂತು

ಅಪೂರ್ವ ಕಾಸರವಳ್ಳಿ ಚೊಚ್ಚಲ ನಿರ್ದೇಶನದ 'ನಿರುತ್ತರ' ಚಿತ್ರದ ಹಾಡುಗಳನ್ನು ಇತ್ತೀಚೆಗೆ ಹೊರತರಲಾಯಿತು. ನಟಿ ಹಾಗು ನಿರ್ಮಾಪಕಿ ಭಾವನಾ ತಮ್ಮ 'ನಿರುತ್ತರ' ಹಾಡುಗಳ ರಿಲೀಸ್‌ಗೆ ಸಿನಿಮಾ ರಂಗದ ದಿಗ್ಗಜರನ್ನು ಆಹ್ವಾನಿಸಿದ್ದರು. ಸಚಿವ ಹಾಗು ಹಿರಿಯ ನಟ ಅಂಬರೀಷ್ ಅಂದಿನ ಹೈಲೈಟ್. ಉಳಿದಂತೆ ಅಂದಿನ ಕಾರ್ಯಕ್ರಮದಲ್ಲಿ ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ, ದರ್ಶನ್, ಸಂಚಾರಿ ವಿಜಯ್, ವಿಜಯಲಕ್ಷ್ಮೀಸಿಂಗ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್ .ವಿ.ರಾಜೇಂದ್ರ ಸಿಂಗ್‌ಬಾಬು, ನಟ ಆದಿತ್ಯ, ಯೋಗೇಶ್, ಅನಿರುದ್ಧ ಹಾಗು ನಿರುತ್ತರ ಚಿತ್ರದ ನಾಯಕ ಕಿರಣ್, ಸೇರಿದಂತೆ ಹಲವರು ಆಕರ್ಷಣೆಯಾಗಿದ್ದರು. ಸಂಗೀತ ನಿರ್ದೇಶಕ ನೀಲಾದ್ರಿ ಕುಮಾರ್, ಲಹರಿ ವೇಲು, ಗೀತರಚನೆಕಾರ ಕವಿರಾಜ್, ಗಾಯಕರಾದ ಅರ್ಜುನ್ ನಾಯರ್ ಸೇರಿದಂತೆ ಹಲವರು ಆಡಿಯೋ ರಿಲೀಸ್‌ಗೆ ಸಾಕ್ಷಿಯಾದರು. ಚಿತ್ರದಲ್ಲಿ ಕಿರಣ್, ಭಾವನಾ, ಐಂದ್ರಿರಾ ತೇ, ರಾಹುಲ್ ಬೋಸ್, ರಸೂಲ್ ಪೂಕುಟ್ಟಿ ಇತರರು ನಟಿಸಿದ್ದಾರೆ. ಅಂದಹಾಗೆ, 'ನಿರುತ್ತರ' ಹಾಡುಗಳು ಹೊರಬಂದ ಕ್ಷಣದಲ್ಲಿ ಕ್ಲಿಕ್ಕಿಸಿದ ಫೋಟೋಗಳು ನಿಮಗಾಗಿ...



